





# ಕಲರ್‌ಫುಲ್ ಕಪ್ಪೆ

‘ಕೋೀಡಗನ ಕೋಳಿ ನುಂಗಿತ್ತಾ..’ ಎನ್ನುವ ಹಾಡು ಕೇಳೇ ಇರುತ್ತೀರ. ಇಲ್ಲಿರುವ ಚಿತ್ರದಲ್ಲೂ ಕಪ್ಪೆಯೇ ಹಾವನ್ನು ನುಂಗುವಂತಿದೆಯಲ್ಲ!

ಈ ಕಪ್ಪೆಗಳು ಸಾಮಾನ್ಯ ಕಪ್ಪೆಗಳಲ್ಲ.. ವಿಷಕಪ್ಪೆಗಳು! ದಕ್ಷಿಣ ಅಮೇರಿಕಾದ ಕಾಡುಗಳಲ್ಲಿ, ಬ್ರೆಝಿಲ್, ಆಸ್ಟ್ರೇಲಿಯಾದ ಕಾಡುಗಳಲ್ಲಿ ಈ ರೀತಿಯ ವರ್ಣರಂಜಿತ ವಿಷಕಪ್ಪೆಗಳು ಕಾಣಸಿಗುತ್ತವೆ.

10 ಮಂದಿ ಮನುಷ್ಯರನ್ನು ಸಾಯಿಸಲು ಬೇಕಾಗುವಷ್ಟು ವಿಷದ ಪ್ರಮಾಣ ಈ ಕಪ್ಪೆಗಳಲ್ಲಿ ಇವೆಯಂತೆ. ಎದುರಾಳಿ ಪ್ರಾಣಿಯ ದಾಳಿಯ ಸಣ್ಣ ಸೂಚನೆ ಸಿಕ್ಕರೂ ಈ ವಿಷಕಪ್ಪೆಗಳು ಮೊದಲೇ ಆಕ್ರಮಣ ಮಾಡುತ್ತವೆಯಂತೆ.

ಕಲ್ಲು ಪೊಟರೆ, ಎತ್ತರದ ಮರ, ಮಳೆ ಕಾಡುಗಳಲ್ಲಿ ಈ ಹಾರುವ ವಿಷ ಕಪ್ಪೆಗಳು ಕಂಡು ಬರುತ್ತವೆ. ಬಣ್ಣ ಬಣ್ಣದ ಈ ಕಪ್ಪೆಗಳನ್ನು ಕಂಡು ಕೈ ಹಾಕಿದರೆ, ಅವರ ಕತೆ ಅಷ್ಟೇ. ಆದರೂ ಈ ಕಪ್ಪೆಗಳು ಎಷ್ಟೊಂದು ಚೆಂದ! ನೀಲಿ, ಹಸಿರು, ಹಳದಿ, ಕೆಂಪು, ಕಂದು, ಬೂದು– ಓಹ್ ನಿಜಕ್ಕೂ ಅದ್ಭುತ ಬಣ್ಣಗಳು!

■ ವಸಂತ್ ಮಾಲವಿ